

ಸುಮಾರು ಐದು ಸಾವಿರ ಜನರಿಗೆ ಆಸನ ವ್ಯವಸ್ಥೆ ಇರುವ ಆಂಫಿಥಿಯೇಟರ್

**ಜೋರ್ಡಾನ್ ದೇಶದ ರಾಜಧಾನಿ ಅಮ್ಮಾನ್‌ನಿಂದ ಬರೀ 50 ಕಿ.ಮೀ. ದೂರದಲ್ಲಿರುವ ಊರು ಜೆರಾಶ್. ಏಳನೇ ಶತಮಾನದವರೆಗೂ ವೈಭವದಿಂದ ಮೆರೆದು ನಂತರ ಪ್ರಕೃತಿ ವಿಕೋಪ, ಶತ್ರುದಾಳಿಗಳಿಂದ ವಿಧ್ವಂಸಗೊಂಡಿರುವ ಈ ಊರಿನ ಅಲೆದಾಟ, ಮಾನವನಿರ್ಮಿತಿಶಕ್ತಿಯ ಕುರಿತು ರೋಮಾಂಚನವನ್ನೂ, ಅವನಲ್ಲೇ ಅಡಗಿರುವ ವಿಧ್ವಂಸಕಗುಣದ ಬಗ್ಗೆ ವಿಷಾದವನ್ನೂ ಒಟ್ಟೊಟ್ಟಿಗೇ ಹುಟ್ಟಿಸುತ್ತದೆ.**

ಜೋರ್ಡಾನ್ ದೇಶದ ರಾಜಧಾನಿಯಾದ ಅಮ್ಮಾನ್‌ನಲ್ಲಿ ನಮ್ಮ ಮೊದಲ ಬೆಳಗು. ಉತ್ಸಾಹದಿಂದ ಎದ್ದು ತಯಾರಾಗಿ ಏಳೂವರೆಗೆಲ್ಲ ಕಾಫಿ–ತಿಂಡಿ ಮುಗಿಸಿ ಹೋಟೆಲ್‌ನಿಂದ ಹೊರಬಿದ್ದೆವು.

ಅಮ್ಮಾನ್ ನಗರದಿಂದ ಸುಮಾರು 50 ಕಿ.ಮೀ. ದೂರದಲ್ಲಿ ಗ್ರೀಕೋ–ರೋಮನ್ನರ ಕಾಲದ ಅವಶೇಷಗಳಿರುವ ಸುಂದರ ಊರು ಜೆರಾಶ್, ಅಂದಿನ ನಮ್ಮ ಪಯಣದ ಗುರಿಯಾಗಿತ್ತು. ನಾವು ಉಳಿದುಕೊಂಡಿದ್ದ ಅಬ್ದಲಿ ಎಂಬ ಸ್ಥಳದಿಂದ ಉತ್ತರದಲ್ಲಿದ್ದ ತಬರ್ಬೋರ್ ಎಂಬ ನಿಲ್ದಾಣ ತಲುಪಿ ಅಲ್ಲಿಂದ ಜೆರಾಶ್‌ಗೆ ಬಸ್ ಹತ್ತಿದೆವು. ಜೆರಾಶ್‌ನಿಂದ ಇನ್ನೊಂದಿಪ್ಪತ್ತು ಕಿ.ಮೀ. ಮುಂದೆ ಸಾಗಿದರೆ ಅಜ್ಲಾನ್ ಎಂಬ ಕೋಟೆಯ ನಗರಿ ಸಿಗುತ್ತದೆ. ನಾವು ಹತ್ತಿದ್ದ ಬಸ್ಸೇ ಅಜ್ಲಾನ್‌ಗೆ ಹೋಗುತ್ತಿದ್ದುದರಿಂದ ಅದನ್ನು ನೋಡಿಕೊಂಡೇ ಹಿಂದಿರುಗುವ ಯೋಜನೆ ಹಾಕಿಕೊಂಡೆವು.

ಜೋರ್ಡಾನ್‌ನಲ್ಲಿ ಜೆಟ್ ಎಂಬ ಕಂಪನಿಯ ಬಸ್ಸುಗಳನ್ನು ಹೊರತುಪಡಿಸಿ ಮತ್ತೆಲ್ಲ ಬಸ್ಸುಗಳದ್ದೂ ಒಂದೇ ಕಥೆ. ಅವುಗಳಿಗೆ ಯಾವುದೇ ವೇಳಾಪಟ್ಟಿ ಇಲ್ಲ. ಹೊರಡುವ ಸಮಯ ನಿಗದಿತವಲ್ಲ. ಎಲ್ಲಾ ಸೀಟುಗಳು ಭರ್ತಿಯಾದ ನಂತರವೇ ಬಸ್ ಹೊರಡುವುದು. ನಮಗೆ ಅಂದು ಬೇಗನೇ ಬೆಳಗಾಗಿದ್ದರೂ ಉಳಿದವರ್‍ಯಾರಿಗೂ ಅಂತಹ ಅವಸರವೇನಿರಲಿಲ್ಲ! ಹಾಗಾಗಿ ಬಸ್ ಪೂರ್ತಿ ತುಂಬಿ ಹೊರಡುವಷ್ಟರಲ್ಲಿ ಗಂಟೆ ಒಂಬತ್ತೂವರೆಯಾಗಿತ್ತು. ಎಲ್ಲಿಗೆ ಹೋಗುವುದಾದರೂ ಒಂದು ಜೋರ್ಡಾನಿಯನ್ ದಿನಾರ್ ಕೊಟ್ಟರಾಯಿತು. ಕಂಡಕ್ಟರ್ ಎಲ್ಲರ ಬಳಿ ಬಂದು ದುಡ್ಡು ವಸೂಲಿ ಮಾಡಿದ. ಅಜ್ಲಾನ್‌ಗೆ ಎರಡು ಟಿಕೆಟ್ ಕೊಂಡೆವು.

ಅಮ್ಮಾನ್‌ನಿಂದ ಹೊರಟ ಬಸ್ಸು ಪಟ್ಟಣದ ಸರಹದ್ದನ್ನು ದಾಟಿ ಹಾವು ಹರಿದಂತೆ ವಕ್ರವಾಗಿದ್ದ ದಾರಿಯಲ್ಲಿ ವೇಗವಾಗಿ ಸಾಗಿತು. ಸುತ್ತಲೂ ಕಲ್ಲು ಮಣ್ಣುಗಳಿಂದ ತುಂಬಿದ ಬಂಜರು ಭೂಮಿ. ಕಣ್ಣು ಹಾಯಿಸಿದಷ್ಟು ದೂರಕ್ಕೂ ಒಂದು ಹಸಿರು ಗಿಡವೂ ಕಾಣದು. ಸೂರ್ಯ ಆಗಲೇ ಚುರುಕು ಮುಟ್ಟಿಸುತ್ತಿದ್ದ. ನಾವಿದ್ದ ಚಿಕ್ಕ ಗಾಡಿಯಲ್ಲಿ ಭರ್ತಿ ಜನ. 'ಧೂಮಪಾನ ನಿಷೇಧ' ಎಂದು ಬರೆದಿದ್ದರೂ ಗಂಡಸರು, ಹೆಂಗಸರು, ಮಕ್ಕಳು ಎಂಬ ಭೇದವಿಲ್ಲದೆ ಎಲ್ಲರೂ ಹೊಗೆ ಬಿಡುವವರೇ! ಇನ್ನೊಂದಷ್ಟು ಜನ ತಮ್ಮ ಫೋನುಗಳಲ್ಲಿ ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿ ಸಂಗೀತ ಕಛೇರಿ ನಡೆಸಿದ್ದರು. ಕಿಟಕಿ ತೆರೆದರೆ ಮುಖಕ್ಕೆ ರಾಚುವ ದೂಳು.

ಇಂತಹ ಉಸಿರುಗಟ್ಟಿಸುವ ವಾತಾವರಣ ಒಂದೆಡೆಯಾದರೆ ನಮ್ಮನ್ನು ನೋಡಿದೊಡನೆ ಭಾರತೀಯರೆಂದು ಬಂದು ಮಾತನಾಡಿಸಿ ಜೋರ್ಡಾನ್ ದೇಶಕ್ಕೆ ಸ್ವಾಗತ ಕೋರುವ ಜನರು ಇನ್ನೊಂದೆಡೆ. ಅಂತೂ ಕುಲುಕಾಡುವ ಬಂಡಿಯಲ್ಲಿ ಮುಕ್ಕಾಲು ಗಂಟೆಯ ಪ್ರಯಾಣ ಮಾಡಿ ಜೆರಾಶ್ ಉತ್ಖನನ ಪ್ರದೇಶ ತಲುಪಿದೆವು. ನಮ್ಮಿಬ್ಬರನ್ನು ಬಿಟ್ಟು ಎಲ್ಲರೂ ಜೆರಾಶ್‌ನಲ್ಲಿ ಇಳಿದಾಗ ಆ ಡ್ರೈವರ್ ತಾನು ಅಜ್ಲಾನ್ ಹೋಗುವುದಿಲ್ಲವೆಂದು



ಓವಲ್ ಪ್ಲಾಜಾ